



**ರಾಜಕೀಯ ಲವ್ ಲೆಟರ್**

ಪ್ರಿಯೆ ನೀನು 'ಬಿಜೆಪಿ' ಜೊತೆ ಸೇರಿ ನಂಗೆ ಹೂ ಕೊಟ್ಟರೂ ಓಕೆ!

'ಜೆಡಿಎಸ್' ಸೇರಿ ನಂಗೆ 'ಹುಲ್ಲು' ಕೊಟ್ರೂ ಸರಿಯೇ!

ಆದ್ರೆ ಕಾಂಗ್ರೆಸ್ ಜೊತೆ ಸೇರಿ 'ಕೈ' ಮಾತ್ರ ಕೊಡ್ಬೇಡ.!

★★★

ಹೊಸದಾಗಿ ತೆಗೆದುಕೊಂಡಿದ್ದ ಬೈಕ್‌ಗೆ ಪೆಟ್ರೋಲ್ ಹಾಕಿಸಲು ಮಂಟಾ ಪೆಟ್ರೋಲ್ ಬಂಕ್‌ಗೆ ಹೋದ.

ಅಲ್ಲಿ ಹೀಗೆ ಬರೆದಿತ್ತು 'ಇಲ್ಲಿ ಮೊಬೈಲ್ ಉಪಯೋಗಿಸುವುದನ್ನು ನಿಷೇಧಿಸಲಾಗಿದೆ'. ತಕ್ಷಣ ಅಲ್ಲೇ ತನ್ನ ಮೊಬೈಲ್ ತೆಗೆದು ಪರಿಚಿತರೆಲ್ಲರಿಗೂ ಫೋನ್ ಮಾಡಿ ಹೇಳಿದ– ನಾನೀಗ ಪೆಟ್ರೋಲ್ ಬಂಕ್‌ನಲ್ಲಿ ಇದ್ದೇನೆ. ಯಾರೂ ನನಗೆ ಫೋನ್ ಮಾಡಬೇಡಿ!

★★★

ಗುಂಡ: 'ನಿಮ್ಮಲ್ಲಿ ಸ್ಪೆಷಲ್ ಕಾಫಿ ಸಿಗುತ್ತದಂತೆ ಹೌದಾ?'
ಮಾಣಿ: 'ಹೌದು ಸಾರ್ ಸಿಗುತ್ತೆ.'
ಗುಂಡ: 'ಹಾಗಾದ್ರೆ ಸ್ಪೆಷಲ್ ಕಾಫಿಗೂ ಆರ್ಡಿನರಿ ಕಾಫಿಗೂ ಏನು ವ್ಯತ್ಯಾಸ?'
ಮಾಣಿ: 'ಸ್ಪೆಷಲ್ ಕಾಫಿಯ ಗ್ಲಾಸನ್ನು ಚೆನ್ನಾಗಿ ತೊಳೆಯುತ್ತೇವೆ.'

★★★

ಮಿತ್ರ: 'ಯಾಕಯ್ಯಾ ಗುಂಡ ಏನೋ ಬೇಸರದಿಂದ ಇರುವಂತೆ ಕಾಣಿಸುತ್ತದೆ.'
ಗುಂಡ: 'ಹೌದು! ಇವತ್ತು ಒಂದು ಬುಕ್ ತೆರೆದು ನೋಡಿದೆ. ಕೊನೆ ಪುಟ ತುಂಬಾ ದುಃಖ ತಂದಿತು.'
ಮಿತ್ರ: 'ಅಂಥಾ ಬುಕ್ ಯಾವುದಯ್ಯಾ ಅದು?'
ಗುಂಡ: 'ನನ್ನ ಬ್ಯಾಂಕ್ ಪಾಸ್ ಬುಕ್!'

★★★

ಪೊಲೀಸ್: 'ನೋ ಎಂಟ್ರಿ' ಅಂತ ಬೋರ್ಡಿದ್ದರೂ ಇಲ್ಲಿ ಯಾಕೆ ಕಾರನ್ನು ನುಗ್ಗಿಸಿದೆ?'
ಗುಂಡ: 'ಅದು ಯಾವುದೋ ಹೊಸ ಸಿನಿಮಾ ಪೋಸ್ಟರ್ ಅಂತ ತಿಳಿದಿದ್ದೆ ಸಾರ್!'

(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು

ಮೇಸ್ಟ್ರು: ಲೋ! ಗುಂಡಾ ಎರಡರಲ್ಲಿ ಎರಡು ಹೋದರೆ ಎಷ್ಟು ಉಳಿಯಿತೋ?

ಗುಂಡ: ವಸಿ ಅರ್ಥಾ ಆಗೊಂಗೆ ಹೇಳಿ ಸಾ..

ಮೇಸ್ಟ್ರು: ನಿನ್ಹತ್ರ ಎರಡು ಇಡ್ಲಿ ಇದೆ ಅಂತ ಇಟ್ಕೊ, ಆ ಎರಡು ಇಡ್ಲೀನೂ ನೀನು ತಿನ್ಕೊಂಡ್ರೆ ಏನು ಉಳಿಯಿತು?

ಗುಂಡ: ಚಟ್ನಿ ಉಳೀತು ಸಾ!

★★★

ಗುಂಡ: ಡಾಕ್ಟ್ರೇ ಈ ಬಕೆಟ್ ಸಿಕ್ಕಾಪಟ್ಟೆ ಸೋರುತ್ತಿದೆ .. ರಿಪೇರಿ ಮಾಡಿಕೊಡ್ತೀರಾ?

ಡಾಕ್ಟರ್: ನಾನ್ಯಾರೂಂತ ಗೊತ್ತಿದೆಯಾ ನಿನಗೆ ?

ಗುಂಡ: ಗೊತ್ತು ಡಾಕ್ಟ್ರೇ. ನೀವು ಪ್ಲಾಸ್ಟಿಕ್ ಸರ್ಜರಿಯಲ್ಲಿ ತುಂಬಾ ಫೇಮಸ್ಸು!

★★★



ಒಂದು ಕಾರನ್ನು ಹರಾಜು ಮಾಡುತ್ತಿದ್ದರು. ಗ್ರಾಹಕರು ಪೈಪೋಟಿ ಮೇಲೆ ಅದರ ಬೆಲೆಯನ್ನು ಲಕ್ಷಗಟ್ಟಲೆ ಹೆಚ್ಚಿಸುತ್ತಿದ್ದರು.

ಆಶ್ಚರ್ಯ ಚಕಿತನಾದ ನಾರಾಯಣ 'ಅಂಥದ್ದೇನಿದೆ ಈ ಕಾರಿನಲ್ಲಿ?' ಎಂದು ಪ್ರಶ್ನಿಸಿದ.

'ಈ ಕಾರಿಗೆ ಐದು ಬಾರಿ ಆಕ್ಸಿಡೆಂಟ್ ಆಗಿದೆ. ಪ್ರತಿ ಆಕ್ಸಿಡೆಂಟ್‌ನಲ್ಲೂ ಕೇವಲ ಹೆಂಡತಿ ಮಾತ್ರ ಸತ್ತಿದ್ದಾಳೆ'. ಎಂದು ಹರಾಜು ಮಾಡುವವ ಹೇಳಿದ.

ನಾರಾಯಣ ಮರು ಮಾತನಾಡದೆ '8 ಲಕ್ಷ ರೂಪಾಯಿ' ಎಂದು ಕೂಗಿದ!

(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ




ಕೇರಳದ ಮಾಂತ್ರಿಕ ಜ್ಯೋತಿಷ್ಯರು ॐ ✝ ☪

ಕೇರಳದ ಕುಟ್ಟಿಚ್ಚಾತನ್ ಕುಳ್ಳಿಚೌಡಿ ದೈವಶಕ್ತಿಯಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ 5 ದಿನದಲ್ಲಿ ಶಾಶ್ವತ ಪರಿಹಾರವಿದೆ.

ಹಲವಾರು ವರ್ಷಗಳಿಂದ ಪ್ರಸಿದ್ಧಿ ಪಡೆದಿರುವ ಇವರು ನಿಮ್ಮ ಭವಿಷ್ಯವನ್ನು ಹಸ್ತ, ಜಾತಕ, ರಾಶಿ ಪ್ರಶ್ನೆ, ಅಷ್ಟಮಂಗಳ ಪ್ರಶ್ನೆಯಿಂದ ತಿಳಿಸುತ್ತಾರೆ. ಉದಾ: ವಿದ್ಯೆ, ಉದ್ಯೋಗ, ವ್ಯಾಪಾರ, ವಿವಾಹ, ಸ್ತ್ರೀ ಪುರುಷ ವಶೀಕರಣ, ಮಾನಸಿಕ ಚಿಂತೆ, ಸಾಲದ ಬಾಧೆ, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಆರೋಗ್ಯ, ಮಾಟ ಕೃತಿಮ, ಬ್ರಹ್ಮ ಪಿಶಾಚಿಗಳಿಗೆ ಹಾಗೂ ಇನ್ನಿತರ ನಿಮ್ಮ ಯಾವುದೇ ರೀತಿಯ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕಾಗಿ ಸಂಪರ್ಕಿಸಿ:

ವಿಳಾಸ: ಎಸ್. ಪೊದುವಾಳ್, ಕಾರ್ಲ ಟವರ್ಸ್, 1ನೇ ಮಹಡಿ, ಮಣ್ಣಗೋಪುರ ಬಳಿ ಮುಖ್ಯರಸ್ತೆ, ಕಾರ್ಕಳ (ದ.ಕ.)

ಪ್ರತಿ ತಿಂಗಳು ದಿ. 10 ರಿಂದ 13ರವರೆಗೆ ಹಾಸನದಲ್ಲಿ ಸಂಪರ್ಕಿಸಬಹುದು.

ಮೊ: 98445 54918, 94493 87974
ದೂರವಾಣಿ ಮುಖಾಂತರವು ವಿವರಗಳನ್ನು ಪಡೆಯಬಹುದು

ಜನಗಳ ಒತ್ತಾಯದ ಮೇರೆಗೆ ಪ್ರತಿ ತಿಂಗಳು ದಿ. 21 ರಿಂದ 23 ರವರೆಗೆ ಬೆಂಗಳೂರಿನಲ್ಲಿಯೂ ಲಭ್ಯವಿರುತ್ತಾರೆ.

ವಿ.ಸೂ.: ಸ್ತ್ರೀ–ಪುರುಷ ವಶೀಕರಣಕ್ಕೆ, ಗಂಧರ್ವ ಸಂಮ್ಮೋಹಿನಿ ಯಂತ್ರವನ್ನು ಮಾಡಿಕೊಡಲಾಗುವುದು.